ಶರಾವತಿ ಹಿನ್ನೀರಿನ ಭಾನ್ಕುಳಿ, ಎಸ್.ಎಸ್. ಭೋಗ್, ಚನ್ನಗೊಂಡ ಗ್ರಾ.ಪಂ ವ್ಯಾಪ್ತಿಯಲ್ಲಿ ರೋಗಿಗಳ ಆರೋಗ್ಯ ದೃಷ್ಟಿಯಿಂದ ಬಿಡಲಾಗಿದ್ದ ಸಂಚಾರಿ ಆಸ್ಪತ್ರೆ ಪುನರಾರಂಭಿಸುವಂತೆ ಮನವಿ ಮಾಡಿರುವೆ.

■ ಹರತಾಳು ಹಾಲಪ್ಪ, ಶಾಸಕ.

# ಮಂಗನ ಖಾಯಿಲೆ ತಡೆಗೆ ಒನ್ ಹೆಲ್ತ್ ಪ್ರಾಜೆಕ್ಟ್ ಜಾರಿ

■ ಹುಲಿಮನೆ ತಿಮ್ಮಪ್ಪ

**ಶಿವಮೊಗ್ಗ:** ಮಲೆನಾಡಿಗರಿಗೆ ಮಂಗನ ಕಾಯಿಲೆ ಒಂದು ದೊಡ್ಡ ಶಾಪವಾಗಿದೆ. ಹಲವು ವರ್ಷಗಳಿಂದ ಕಾಡುತ್ತಿರುವ ಕಾಡಿನ ಕಾಯಿಲೆ 'ಮಂಗನ ಕಾಯಿಲೆ' ಈ ಬಾರಿ ಈ ಊರು ಮುಂದಿನ ಸಲ ಮುಂದಿನ ಊರು. ಹೀಗೆ ತನ್ನ ಪಯಣ ಮುಂದುವರಿಸಿದೆ. ದುತ್ತೆಂದು ಬೇಸಿಗೆ ರಣರಣಿಸುತ್ತಿರುವಾಗಲೇ ಕಾಣಿಸಿಕೊಳ್ಳುವ ಕಾಯಿಲೆಯೇ ಕ್ಯಾಸನೂರು ಫಾರೆಸ್ಟ್ ಡಿಸೀಸ್..

**ಪೈಲೆಟ್ ಯೋಜನೆ ಜಾರಿ:** ಮಲೆನಾಡಿಗರಿಗೆ ಒಂದು ಶಾಪವಾದ ಈ ಕಾಯಿಲೆಗೆ ಮುಕ್ತಿ ಹಾಡಲು ಕೇಂದ್ರ ಸರ್ಕಾರ ಮೊದಲ ಬಾರಿಗೆ ರಾಜ್ಯಕ್ಕೆ ಒನ್ ಹೆಲ್ತ್ ಪ್ರಾಜೆಕ್ಟ್ ಜಾರಿಗೆ ತಂದಿದೆ. ಝೂನೋಟಿಕ್ ಫಾರೆಸ್ಟ್ ಡಿಸೀಸ್‌ಗೆ ಶಾಶ್ವತ ಪರಿಹಾರ ಕಲ್ಪಿಸುವ ನಿಟ್ಟಿನಲ್ಲಿ ಪ್ರಾಯೋಗಿಕ ಹೆಜ್ಜೆ ಇಟ್ಟಿರುವ ಕೇಂದ್ರ ಸರ್ಕಾರವು ಅರಣ್ಯ, ಪಶುಸಂಗೋಪನೆ ಹಾಗೂ ಆರೋಗ್ಯ ಇಲಾಖೆ ಸಹಯೋಗದಲ್ಲಿ ಒನ್ ಪ್ಲಸ್ ಯೋಜನೆ ಜಾರಿಗೆ ತಂದಿದೆ.

ಕಾಡಿನಲ್ಲಿ ಮಂಗಗಳು ಇದ್ದಕ್ಕಿದ್ದಂತೆ ಸಾಯುವುದೇಕೆ? ಅವುಗಳಿಗೆ ವೈರಸ್ ಎಲ್ಲಿಂದ ವಿಲೇವಾರಿ ಆಗುತ್ತಿದೆ. ಜ್ವರ ಬಂದು ಗರ ಬಡಿದು ಕುಳಿತುಕೊಳ್ಳುವ ಮಂಗ ಅಲ್ಲಿಯೇ ಸಾಯುತ್ತದೆ. ಮಂಗ ಸತ್ತಲ್ಲಿ ಮಾತ್ರ ಈ ಕಾಯಿಲೆ ಕಾಣಿಸಿಕೊಳ್ಳುವ ಪರಿಣಾಮ ಜಾಸ್ತಿ ಏಕೆ? ಹೀಗೆ ಹಲವಾರು ಪ್ರಶ್ನೆಗೆ ಇನ್ನೂ ಉತ್ತರ ಸಿಗಬೇಕಿದೆ.

ಶಿವಮೊಗ್ಗ ಜಿಲ್ಲೆ ಅರಳಗೋಡು ಗ್ರಾಮಕ್ಕೆ ಭೇಟಿ ನೀಡಿದ ಅಧ್ಯಯನ ತಂಡ ಮಾಹಿತಿ ಕಲೆ ಹಾಕುತ್ತಿರುವ ದೃಶ್ಯ.

**ಝೂನೋಟಿಕ್‌ನಿಂದ ಸಿಗುತ್ತಾ ಮದ್ದು?:** ಇದಕ್ಕಾಗಿ ಮೊದಲ ಬಾರಿಗೆ ರಾಜ್ಯಕ್ಕೆ ಒನ್ ಹೆಲ್ತ್ ಪ್ರಾಜೆಕ್ಟ್ ಜಾರಿಗೆ ತರಲಾಗಿದೆ. ಝೂನೋಟಿಕ್ ಫಾರೆಸ್ಟ್ ಡಿಸೀಸ್‌ಗೆ ಶಾಶ್ವತ ಪರಿಹಾರ ಕಲ್ಪಿಸುವ ನಿಟ್ಟಿನಲ್ಲಿ ಪ್ರಾಯೋಗಿಕ ಹೆಜ್ಜೆ ಇಟ್ಟಿರುವ ಕೇಂದ್ರ ಸರ್ಕಾರ ಅರಣ್ಯ, ಪಶುಸಂಗೋಪನೆ ಹಾಗೂ ಆರೋಗ್ಯ ಇಲಾಖೆ ಸಹಯೋಗದಲ್ಲಿ ಒನ್ ಪ್ಲಸ್ ಯೋಜನೆ ಜಾರಿಗೆ ತಂದಿದೆ. ರಾಜ್ಯದಲ್ಲಿ ಅಂಥ್ರಾಕ್ಸ್, ಬ್ರುಸಿಲೋಸಿಸ್ ಮತ್ತು ಕೆಎಫ್‌ಡಿ ರೋಗ ತಡೆಗೆ ಪ್ರಾಯೋಗಿಕ ಯೋಜನೆ ಜಾರಿಗೆ ತಂದಿದೆ. ಬೆಂಗಳೂರು ಭಾಗದಲ್ಲಿ ಕಂಡು ಬರುವ ಅಂಥ್ರಾಕ್ಸ್ ರೋಗ, ಕೊಪ್ಪಳದಲ್ಲಿ ಹೆಚ್ಚಿರುವ ಬ್ರುಸಿಲೋಸಿಸ್ ಹಾಗೂ ಮಲೆನಾಡಿನ ಮಂಗನ ಕಾಯಿಲೆ ಬಗ್ಗೆ ಹೆಚ್ಚಿನ ಅಧ್ಯಯನ ಮತ್ತು ಸಂಶೋಧನೆ ನಡೆಯಲಿದೆ.

■ ಕಾಡಿನಲ್ಲಿ ಮಂಗಗಳು ಇದ್ದಕ್ಕಿದ್ದಂತೆ ಸಾಯುವುದೇಕೆ?

■ ಅವುಗಳಿಗೆ ವೈರಸ್ ಎಲ್ಲಿಂದ ವಿಲೇವಾರಿ ಆಗುತ್ತಿದೆ?

■ ಮಂಗ ಸತ್ತಲ್ಲಿ ಮಾತ್ರ ಈ ಕಾಯಿಲೆ ಕಾಣಿಸಿಕೊಳ್ಳುವ ಪರಿಣಾಮ ಜಾಸ್ತಿ ಏಕೆ?

ಈಗಾಗಲೇ ಜಾರ್ಖಂಡ್, ಉತ್ತರಾಖಂಡ್‌ನಲ್ಲಿ ಜಾರಿಯಲ್ಲಿರುವ ಈ ಪ್ರಾಯೋಗಿಕ ಯೋಜನೆ, ಇದೀಗ ರಾಜ್ಯದಲ್ಲಿ ಜಾರಿಯಾಗಿದೆ. ಮುಖ್ಯವಾಗಿ ಕಾಡು ಪ್ರಾಣಿಗಳಿಂದ ಹರಡುವ ರೋಗಗಳ ನಿಯಂತ್ರಣಕ್ಕೆ ಒನ್ ಪ್ಲಸ್ ಯೋಜನೆ ಸಹಕಾರಿ.

ಯೋಜನೆ ಜಾರಿಯಾದಾಗಿನಿಂದ ಕೇಂದ್ರ ತಜ್ಞರ ತಂಡ, ಮಂಗನ ಕಾಯಿಲೆ ಬಗ್ಗೆ ಅಧ್ಯಯನ ನಡೆಸುತ್ತಿದೆ. ಇದಕ್ಕೆ ಪೂರಕವಾಗಿ ಕಳೆದ ಜೂ.28ರಂದು ಬೆಂಗಳೂರಿನಲ್ಲಿ ಕರ್ನಾಟಕದಲ್ಲಿ ಒನ್ ಹೆಲ್ತ್ ಯೋಜನೆ ವಿದ್ಯುಕ್ತವಾಗಿ ಚಾಲನೆಗೊಂಡಿದ್ದು, ಕೇಂದ್ರ ಸರ್ಕಾರದ ಅತುಲ್ ಚುತುರ್ವೇದಿ ಅಧ್ಯಕ್ಷತೆಯಲ್ಲಿ ಯೋಜನೆ ಜಾರಿಗೆ ತರಲಾಯಿತು.

**ಅರಳಗೋಡು ಮತ್ತು ಕೀಗಡಿ ಗ್ರಾಮಕ್ಕೆ ಭೇಟಿ:** ಈ ಸಂಬಂಧ ಮೊದಲ ಹಂತದಲ್ಲಿ ವೈದ್ಯರ ಸಭೆ ಸಹ ನಡೆದಿದ್ದು, ಬೆಂಗಳೂರಿನ ಪೆಥಾಲಾಜಿಸ್ಟ್ ಡಾ. ಪ್ರಕಾಶ್ ನೇತೃತ್ವದಲ್ಲಿ ತಂಡವೊಂದು ಜಿಲ್ಲೆಯ ಪ್ರಮುಖ 2 ಪ್ರದೇಶಗಳಿಗೆ ಭೇಟಿ ನೀಡಿ ಅಧ್ಯಯನ ಆರಂಭಿಸಿದೆ. ಕಳೆದ ಜುಲೈ 27 ಮತ್ತು 28 ರಂದು ಡಾ. ಪ್ರಕಾಶ್, ಡಾ. ಚೇತನ್ ಹಾಗೂ ವನ್ಯಜೀವಿ ವಿಭಾಗದ ಮುಖ್ಯ ಪಶುವೈದ್ಯಕೀಯ ಅಧಿಕಾರಿ ಡಾ. ವಿನಯ್ ತಂಡ ಕೀಗಡಿ ಹಾಗೂ ಅರಳಗೋಡು ಪ್ರದೇಶಕ್ಕೆ ತೆರಳಿ ಅಲ್ಲಿ ಜನರನ್ನು ಭೇಟಿ ಮಾಡಿ, ವಿಚಾರಗಳ ಬಗ್ಗೆ ಮಾಹಿತಿ ಪಡೆದುಕೊಂಡಿದ್ದಾರೆ. ಪ್ರಾಸ್ತಾವಿಕ ಅಧ್ಯಯನ ಆರಂಭಿಸಿರುವ ತಂಡ, ಮುಂದಿನ ಹಂತಗಳಲ್ಲಿ ವಿವಿಧ ತಂಡಗಳಾಗಿ ಮಲೆನಾಡಿನ ವಿವಿಧ ಪ್ರದೇಶಗಳಿಗೆ ಭೇಟಿ ನೀಡಲಿದೆ. ಅಲ್ಲದೆ, ಕಾಯಿಲೆ ಪತ್ತೆ, ಚಿಕಿತ್ಸೆ ಹಾಗೂ ಅದನ್ನು ತಡೆಗಟ್ಟುವ ನಿಟ್ಟಿನಲ್ಲಿ ಕೈಗೊಳ್ಳುವ ಮುನ್ನೆಚ್ಚರಿಕೆ ಮತ್ತು ನಿಖರ ಔಷಧಿ ಪತ್ತೆ ಸೇರಿದಂತೆ ವಿವಿಧ ಆಯಾಮಗಳಲ್ಲಿ ಅಧ್ಯಯನ ನಡೆಸಲಿದೆ. ಒಟ್ಟಾರೆ, ಒನ್ ಪ್ಲಸ್ 10 ವರ್ಷಗಳ ಯೋಜನೆ. ಈ ಯೋಜನೆಯಿಂದಾದರೂ, ಮಲೆನಾಡಿಗರಿಗೆ ಮುಕ್ತಿ ಸಿಗಬಹುದು ಎಂಬ ನಿರೀಕ್ಷೆಯಲ್ಲಿ ಕಾಡಂಚಿನ ಜನರಿದ್ದಾರೆ.

## ಸುದ್ದಿ ಮಿಂಚು

### ಅಣ್ಣನಿಂದ ತಮ್ಮನ ಮೇಲೆ ಗುಂಡು

**ಭದ್ರಾವತಿ:** ದಾರಿ ಮಧ್ಯದಲ್ಲಿ ಹೂವಿನ ಗಿಡ ನೆಟ್ಟು ಜಮೀನಿಗೆ ಹೋಗದಂತೆ ಅಡ್ಡಿಪಡಿಸುತ್ತಿದ್ದಾರೆಂದು ಆಕ್ರೋಶಗೊಂಡ ವ್ಯಕ್ತಿಯೋರ್ವ ತಮ್ಮನ ಕುಟುಂಬವನ್ನು ಅವಾಚ್ಯ ಶಬ್ದಗಳಿಂದ ನಿಂದಿಸಿ ಕೊನೆಗೆ ಮನೆಯಲ್ಲಿದ್ದ ನಾಡಬಂದೂಕಿನಿಂದ ತಮ್ಮನ ಮೇಲೆ ಗುಂಡು ಹಾರಿಸಿರುವ ಘಟನೆ ತಡವಾಗಿ ಬೆಳಕಿಗೆ ಬಂದಿದೆ. ತಾಲೂಕಿನ ಸಿದ್ದರಮಟ್ಟಿ ಗ್ರಾಮದ ಮುನಿಸ್ವಾಮಿ ಎಂಬುವವರು ತಮ್ಮ ಮುರುಗೇಶ್(35) ಮೇಲೆ ಗುಂಡು ಹಾರಿಸಿದ್ದು, ಗುಂಡು ಎದೆಗೆ ಬೀಳದೆ ತೊಡೆಗೆ ತಗುಲಿದೆ. ಗಾಯಗೊಂಡಿರುವ ಮುರುಗೇಶ್ ಹೆಚ್ಚಿನ ಚಿಕಿತ್ಸೆಗಾಗಿ ಶಿವಮೊಗ್ಗ ಖಾಸಗಿ ಆಸ್ಪತ್ರೆಗೆ ದಾಖಲಾಗಿದ್ದಾರೆ. ಈ ಸಂಬಂಧ ಗ್ರಾಮಾಂತರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

### ಬಹಿರಂಗ ಬೈಕ್ ಹರಾಜು

**ಹೊಸನಗರ:** ಪಿಸಿಜೆ ಜೆಎಂಎಫ್‌ಸಿ ನ್ಯಾಯಾಲಯದ ಸಿಸಿ ನಂಬರ್ 1180\2002ರಲ್ಲಿ ನ್ಯಾಯಾಲಯದ ಪಿಆರ್ ನಂಬರ್ 55\2004ರಲ್ಲಿನ 97ಜಿ 19 ಎಫ್ 00620ರ ಕಪ್ಪು ಬಣ್ಣದ ಹೀರೋ ಹೊಂಡ ಸ್ಪ್ಲೆಂಡರ್ ಬೈಕನ್ನು ನ್ಯಾಯಾಲಯದ ಆದೇಶದ ಮೇರೆಗೆ ಆ.6ರಂದು ಬೆಳಿಗ್ಗೆ ಹೊಸನಗರ ಠಾಣೆಯಲ್ಲಿ 11 ಗಂಟೆಗೆ ಬಹಿರಂಗ ಹರಾಜು ಪ್ರಕ್ರಿಯೇ ನಡೆಯಲಿದ್ದು, ಆಸಕ್ತರು ಹರಾಜಿನಲ್ಲಿ ಭಾಗವಹಿಸಬೇಕೆಂದು ಠಾಣಾ ಸಬ್‌ಇನ್ಸ್‌ಪೆಕ್ಟರ್ ನೀರರಾಜ್ ತಿಳಿಸಿದ್ದಾರೆ.

### ವ್ಯಕ್ತಿ ಕೊಲೆ

**ಶಿವಮೊಗ್ಗ:** ಇಲ್ಲಿನ ವಿನೋಬನಗರ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ಗಂಧರ್ವ ಬಾರ್ ಹತ್ತಿರ ಮಂಗಳವಾರ ತಡರಾತ್ರಿ, ಕಿರಣ್ ಅಲಿಯಾಸ್ ಪುಚ್ಚಿ (23) ಎಂಬ ವ್ಯಕ್ತಿಯ ಕೊಲೆಯಾಗಿದೆ. ಸ್ನೇಹಿತರು ಪಾರ್ಟಿ ನಡೆಸುತ್ತಿದ್ದಾಗ ಕಿರಣ್ ತನಗೂ ಪಾರ್ಟಿ ಕೊಡಿಸುವಂತೆ ಕಿರಿಕ್ ಮಾಡಿದ್ದ ಎನ್ನಲಾಗಿದೆ. ಈ ವಿಚಾರದಲ್ಲಿ ಜಗಳ ಪ್ರಾರಂಭವಾಗಿ ಬಾಟಲಿ ಹಾಗೂ ಚಾಕುವಿನಿಂದ ಪರಸ್ಪರ ಹೊಡೆದಾಡಿಕೊಂಡಿದ್ದಾರೆ. ಹೊಸಮನೆ ಬಡಾವಣೆ ಪ್ರಜ್ವಲ್ ಹಾಗೂ ಗಾಡಿಕೊಪ್ಪದ ಕಾರ್ತಿಕ್‌ನನ್ನು ಪೊಲೀಸರು ವಶಕ್ಕೆ ಪಡೆದು ತನಿಖೆ ಮುಂದುವರೆಸಿದ್ದಾರೆ.

ಮೃತ ಕಿರಣ್ ಮೇಲೆ ಹಿಂದೆ ದೊಡ್ಡಪೇಟೆ ಠಾಣೆ ವ್ಯಾಪ್ತಿಯಲ್ಲಿ ರೌಡಿ ಶೀಟರ್ ದಾಖಲಾಗಿದ್ದು, ಇತ್ತೀಚಿಗೆ ಸನ್ನಡತೆ ಆಧಾರದ ಮೇಲೆ ರೌಡಿ ಶೀಟರನ್ನು ತೆರವುಗೊಳಿಸಲಾಗಿತ್ತು. ಈ ಸಂಬಂಧ ವಿನೋಬನಗರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

### ಕೆರೆ ಸಮೀಪದ ಕಟ್ಟಡ ತೆರವು

**ಶಿವಮೊಗ್ಗ:** ಹೈಕೋರ್ಟ್ ಸೂಚನೆ ಮೇರೆಗೆ ಕೆರೆ ಸಮೀಪ ನಿರ್ಮಿಸಲಾಗಿದ್ದ ಕಟ್ಟಡಗಳನ್ನು ತಹಸೀಲ್ದಾರ್ ಎನ್.ಜೆ. ನಾಗರಾಜ್ ನೇತೃತ್ವದ ಅಧಿಕಾರಿಗಳ ತಂಡ ಬುಧವಾರ ಕಾರ್ಯಾಚರಣೆ ನಡೆಸಿ ತೆರವುಗೊಳಿಸಿದೆ. ಈ ಕುರಿತಂತೆ ಮಾಹಿತಿ ನೀಡಿರುವ ತಹಸೀಲ್ದಾರ್ ಎನ್.ಜೆ. ನಾಗರಾಜ್, ಕೆರೆಯ ಬಳಿ ನಿರ್ಮಿಸಲಾಗಿರುವ ಕಟ್ಟಡಗಳ ತೆರವು ಮಾಡುವಂತೆ ವ್ಯಕ್ತಿಯೋರ್ವರು ಹೈಕೋರ್ಟ್‌ಗೆ ಅರ್ಜಿ ಸಲ್ಲಿಸಿದ್ದರು. ಕಟ್ಟಡ ತೆರವುಗೊಳಿಸಿ, ಕೆರೆ ಮೂಲ ಸ್ಥಿತಿ ಕಾಯ್ದುಕೊಳ್ಳುವಂತೆ ಹೈಕೋರ್ಟ್ ಸೂಚಿಸಿದ ಮೇರೆಗೆ, ನಿಯಮಾನುಸಾರ ತೆರವುಗೊಳಿಸಲಾಗಿದೆ. ಕೆರೆ ಬಳಿ ನಿರ್ಮಿಸಲಾಗಿದ್ದ ಹೋಟೆಲ್, ಫಿಶ್ ಪಾಂಡ್, ಫೌಂಟೇನ್, ಆಫೀಸ್ ಕಟ್ಟಡ ತೆರವುಗೊಳಿಸಲಾಗಿದೆ. ಈ ಕುರಿತಂತೆ ಸಮಗ್ರ ವರದಿ ನ್ಯಾಯಾಲಯಕ್ಕೆ ಸಲ್ಲಿಸಲಾಗುವುದು ಎಂದು ಮಾಹಿತಿ ನೀಡಿದ್ದಾರೆ.

# ಬೇಡಿಕೆ ಈಡೇರಿಕೆಗಾಗಿ ನಾಳೆ ಬೃಹತ್ ಪಾದಯಾತ್ರೆ

**ಸಾಗರ:** ತಾಲೂಕಿನ ಕರೂರು ಬಾರಂಗಿ ಹೋಬಳಿ ಕಾನೂರು ಸಮೀಪ ಉರಳುಗಲ್ಲು ಗ್ರಾಮಕ್ಕೆ ಮೂಲಸೌಕರ್ಯ ಹಾಗೂ ಅರಣ್ಯಾಧಿಕಾರಿಗಳು ಮರಕಡಿತಲೆ ಪ್ರಕರಣದಲ್ಲಿ ಗ್ರಾಮಸ್ಥರ ಮೇಲೆ ಕೇಸ್ ಹಾಕಿ ಅವರನ್ನು ಅಮಾನವೀಯವಾಗಿ ನಡೆದುಕೂಂಡಿದ್ದರ ವಿರುದ್ಧ ಆ. 5ರಂದು ಬೃಹತ್ ಹೋರಾಟಕ್ಕೆ ಜನಪರ ಸಂಘಟನೆಗಳು ಕರೆ ನೀಡಿದೆ.

ಏನಿದು ಪ್ರಕರಣ?:

ಇತ್ತೀಚೆಗೆ ಕಾನೂರು ಅಭಯಾರಣ್ಯ ವ್ಯಾಪ್ತಿಯಲ್ಲಿ ಉರುಳುಗಲ್ಲು ಎನ್ನುವ ಗ್ರಾಮಕ್ಕೆ ರಸ್ತೆ ಹಾಗೂ ವಿದ್ಯುತ್ ಸೌಲಭ್ಯ ಪಡೆಯಲು ಗ್ರಾಮದ ಜನರು ಕೆಲ ಕಾಡು ಜಾತಿ ಮರ ಉರುಳಿಸಿ ರಸ್ತೆ ನಿರ್ಮಿಸಿದ್ದರು.ಆದರೆ, ಕಾರ್ಗಲ್ ವನ್ಯಜೀವಿ ಅರಣ್ಯಾಧಿಕಾರಿ ಪ್ರಮೋದ್ ಗ್ರಾಮದ ಜನರ ಮೇಲೆ ಮರಕಡಿತಲೆ ಪ್ರಕರಣದಲ್ಲಿ ಕೇಸ್ ಹಾಕಿ ಕ್ರಿಮಿನಲ್ ಆರೋಪಿಗಳ ಹಾಗೆ ಅವರನ್ನು ಬಿಂಬಿಸಿ ಮುಖಕ್ಕೆ ಬಟ್ಟೆ ಕಟ್ಟಿ ಸ್ಲೇಟು ಹಿಡಿಸಿದ್ದರು. ಈಬಗ್ಗೆ ಸೋಷಿಯಲ್ ಮೀಡಿಯಾದಲ್ಲಿ ವೈರಲ್ ಆಗಿತ್ತು.

ಈ ಘಟನೆ ಶಾಸಕ ಹೆಚ್. ಹಾಲಪ್ಪ ಹರತಾಳ , ಶಿವಮೊಗ್ಗದ ಜಿಲ್ಲಾ ಉಸ್ತುವಾರಿ ಸಚಿವರ ಕೆಡಿಪಿ ಸಭೆಯಲ್ಲಿ ಅರಣ್ಯಾಧಿಕಾರಿಗಳ ವರ್ತನೆ ಖಂಡಿಸಿ, ಅಧಿಕಾರಿ ಅಮಾನತಿಗೆ ಎಂದು ಆಗ್ರಹಿಸಿದರು. ಈ ವಿಷಯ ಗಮನಿಸಿದ ಉಸ್ತುವಾರಿ ಸಚಿವರು ಅಧಿಕಾರಿ ಬೇರೆ ಕಡೆ ವರ್ಗಾವಣೆ ಮಾಡಿ ತನಿಖೆ ನಡೆಸಲು ಆದೇಶ ನೀಡಿದೆ.

**5ಕ್ಕೆ ಪಾದಯಾತ್ರೆ:** ಕರೂರು ಬಾರಂಗಿ ಹೋಬಳಿ ಶರಾವತಿ ಮುಳುಗಡೆ ರೈತರಮೇಲಿನ ದಬ್ಬಾಳಿಕೆಯಾಗುತ್ತಿದೆ. ರಸ್ತೆ, ವಿದ್ಯುತ್, ಸೌಲಭ್ಯ ವಂಚಿತ ಗ್ರಾಮಗಳು ಇದೆ. ಅನೇಕ ಗ್ರಾಮಗಳಲ್ಲಿ ಜನರು ಅನಾರೋಗ್ಯಪೀಡಿತರಾದರೆ ಅವರನ್ನು ಆಸ್ಪತ್ರೆಗೆ ಕರೆದುಕೊಂಡು ಹೋಗಲು ವಾಹನ ಸೌಲಭ್ಯಕ್ಕೆ ರಸ್ತೆಗಳೇ ಇಲ್ಲ. ಬೆಡಶೀಟ್ ಅಥವಾ ಕಂಬಳಿ ಜೋಲಿ ಮಾಡಿಕೊಂಡು ಹತ್ತಾರು ಕಿಲೋಮೀಟರ್ ಹೊತ್ತು ತರಬೇಕಾದ ಪರಿಸ್ಥಿತಿ ಇದೆ.

**ಬೇಡಿಕೆ ಏನು?;** ರೈತರ ಮೇಲೆ ಹಾಕಿರುವ ಕೇಸ್ ವಾಪಾಸು ಪಡೆಯಬೇಕು. ಅಮಾಯಕರ ಮೇಲೆ ಕೇಸ್ ಹಾಕಿದ ಅರಣ್ಯಾಧಿಕಾರಿ ಅಮಾನತು ಮಾಡಬೇಕು. ಉರುಳಗಲ್ಲು ಗ್ರಾಮಗಳಿಗೆ ವಿದ್ಯುತ್ ಸೌಲಭ್ಯ ನೀಡಬೇಕು. ಅರಣ್ಯಾಧಿಕಾರಿಗಳ ಕಿರುಕುಳ ನಿಲ್ಲಿಸಬೇಕು. ಕಾಡುದಾರಿಯಲ್ಲಿ ಕನಿಷ್ಟ ಆಟೋ, ಜೀಪ್ ಹೋಗುವ ರಸ್ತೆ ನಿರ್ಮಿಸಬೇಕು. ಪಾರಂಪರಿಕ ಅರಣ್ಯವಾಸಿಗಳು ಬುಡಕಟ್ಟು ಜನಾಂಗದ ಹಕ್ಕಿನ ಅನ್ವಯ ಅವರಿಗೆ ಹಕ್ಕುಪತ್ರ ನೀಡಬೇಕು ಸೇರಿದಂತೆ ಮತ್ತಿತರ ಬೇಡಿಕೆ ಈಡೇರಿಕೆಗೆ ಒತ್ತಾಯಿಸಿ ಬೃಹತ್ ಪಾದಯಾತ್ರೆ ಹಮ್ಮಿಕೊಂಡಿದೆ.

ಆ.5ರಂದು ನಡೆಯುವ ಬೃಹತ್ ಪಾದಯಾತ್ರೆ ಹೋರಾಟಕ್ಕೆ ಅನೇಕ ಸಂಘಟನೆ ಬೆಂಬಲ ನೀಡಿವೆ. ನಮ್ಮನ್ನು ಸಹ ಎಲ್ಲರಂತೆಯೇ ಬದುಕುವ ಅರ್ಹತೆ ಅಧಿಕಾರಿಗಳು ನೀಡುವವರೆಗೆ ನಮ್ಮ ಹೋರಾಟವು ಮುಂದುವರೆಯುತ್ತದೆ.

■ ಜಿ.ಟಿ. ಸತ್ಯನಾರಾಯಣ
ಜನಪರ ಸಂಘಟನೆ ಸಂಚಾಲಕ.

ಉರುಳುಗಲ್ಲು ಗ್ರಾಮದ ಜನರ ಮೇಲೆ ಅಧಿಕಾರಿಗಳು ನಡೆದುಕೊಂಡ ರೀತಿ ಸರಿಯಲ್ಲ. ಇದರ ಬಗ್ಗೆ ಸರ್ಕಾರದ ಗಮನಕ್ಕೆ ತರಲಾಗಿದೆ. ಸಂಬಂಧಪಟ್ಟ ಅಧಿಕಾರಿ ಮೇಲೆ ಸೂಕ್ತ ತನಿಖೆ ನಡೆಯಲಿದೆ.

■ ಹೆಚ್. ಹಾಲಪ್ಪ ಹರತಾಳು, ಶಾಸಕರು.

# ಜೆಡಿಎಸ್ ಪಕ್ಷದ ಕಾರ್ಯಕರ್ತರ ಸಭೆ

**ಹೊಸನಗರ:** ಜೆಡಿಎಸ್ ಮತ್ತಷ್ಟು ಬಲ ಪಡಿಸಲು ಆ. 20ನೇ ಶನಿವಾರ 11 ಗಂಟೆಗೆ ಹೊಸನಗರ ಪ್ರವಾಸಿ ಮಂದಿರದ ಹತ್ತಿರವಿರುವ ಗಾಯಿತ್ರಿ ಮಂದಿರದಲ್ಲಿ ತಾಲೂಕು ಜೆಡಿಎಸ್ ಪಕ್ಷದ ಕಾರ್ಯಕರ್ತರ ಸಭೆ ಕರೆಯಲಾಗಿದೆ ಎಂದು ಜೆಡಿಎಸ್ ಪಕ್ಷದ ಮಾಜಿ ಪ್ರಧಾನ ಕಾರ್ಯದರ್ಶಿ ಆರ್.ಎ. ಚಾಬುಸಾಬ್ ಹೇಳಿದರು. ಹೊಸನಗರ ಪ್ರವಾಸಿ ಮಂದಿರದಲ್ಲಿ ಜೆಡಿಎಸ್ ಪಕ್ಷದ ಅಧ್ಯಕ್ಷರ ಹಸ್ತಾಂತರ ಕಾರ್ಯಕ್ರಮದ ನಂತರ ಅವರು ಮಾತನಾಡಿ, ಕಾರ್ಯಕರ್ತರ ಸಮಾವೇಶಕ್ಕೆ ತೀರ್ಥಹಳ್ಳಿ ವಿಧಾನ ಸಭಾ, ಹೋಬಳಿ, ನಗರ ಹೋಬಳಿ ಕಾರ್ಯಕರ್ತರು ಹಾಗೂ ಸಾಗರ ವಿಧಾನ ಸಭಾ ಕ್ಷೇತ್ರದ ಕಸಬಾ, ಹೋಬಳಿ, ಕೆರೆಹಳ್ಳಿ ಹೋಬಳಿ ಕಾರ್ಯಕರ್ತರು ಆಗಮಿಸಲಿದ್ದು, ಜೆಡಿಎಸ್ ಪಕ್ಷದ ಜಿಲ್ಲಾಧ್ಯಕ್ಷ ಶ್ರೀಕಾಂತ್, ಶಿವಮೊಗ್ಗ ಗ್ರಾಮಾಂತರ ಮಾಜಿ ಶಾಸಕರಾದ ಶಾರದ ಪೂರ್‍ಯಾನಾಯ್ಕ್, ಭದ್ರಾವತಿ ಶಾರದ ಅಪ್ಪಾಜಿಗೌಡ, ಜಿಲ್ಲಾ ಜನತಾದಳದ ಕಾರ್ಯಾಧ್ಯಕ್ಷ ರಾಮಕೃಷ್ಣ, ರಾಜ್ಯ ಮುಖಂಡರಾದ ಆರ್.ಎ. ಚಾಬುಸಾಬ್, ತಾಲ್ಲೂಕು ಮಾಜಿ ಅಧ್ಯಕ್ಷ ಎಂ.ವಿ. ಜಯರಾಮ್ ಇನ್ನೂ ಮುಂತಾದವರು ಆಗಮಿಸಿ ಜೆಡಿಎಸ್ ಬಲಗೊಳಿಸಲಿದ್ದಾರೆ ಎಂದರು.

**ಅಧಿಕಾರ ಹಸ್ತಾಂತರ:** ಸುಮಾರು 20 ವರ್ಷಗಳಿಂದ ಎಂ.ವಿ. ಜಯರಾಮ್ ತಾಲ್ಲೂಕು ಜೆಡಿಎಸ್ ಪಕ್ಷದ ಅಧ್ಯಕ್ಷರಾಗಿ ಸೇವೆ ಸಲ್ಲಿಸಿ ಅಧ್ಯಕ್ಷ ಸ್ಥಾನಕ್ಕೆ ರಾಜೀನಾಮೆ ನೀಡಿದ್ದು ಆ ಸ್ಥಾನಕ್ಕೆ ರಿಪ್ಪನ್‌ಪೇಟೆ ವರ್ತೇಶ್‌ರನ್ನು ನೂತನ ಜೆಡಿಎಸ್ ಪಕ್ಷದ ತಾಲ್ಲೂಕು ಅಧ್ಯಕ್ಷರನ್ನಾಗಿ ನೇಮಕ ಮಾಡಲಾಗಿದ್ದು, ಈ ಸಂದರ್ಭ ಎಂ.ವಿ. ಜಯರಾಮ್ ಅವರು ವರ್ತೇಶ್‌ಗೆ ಅಧಿಕಾರ ಹಸ್ತಾಂತರಿಸಿದರು.ಮಾಜಿ ತಾಪಂ ಉಪಾಧ್ಯಕ್ಷೆ ಸುಮತಿ ಆರ್. ಪೂಜಾರ್, ವರದರಾಜ್, ಗೋಪಾಲ ಎಸ್.ಕೆ., ಆರ್.ಎಸ್. ಮಂಜುನಾಥ್, ಈರಣ್ಣ, ಜಯನಗರ ವಾಸಪ್ಪ ಗೌಡ, ಷಣ್ಮುಖ ಜಯನಗರ, ರಘು ಆಚಾರ್, ಭಾಗ್ಯ ಗೋಪಾಲ್, ಜಿ.ಎಸ್. ವರದರಾಜ್, ಎಂ.ಪಿ. ರಮಾನಂದ, ಹೆಚ್.ಆರ್. ಪ್ರಕಾಶ್, ಕಾಯ ನಾಗೇಶ್, ಮಾಸ್ತಿ ಕಟ್ಟೆ ವಾಸಪ್ಪ ಗೌಡ ಇದ್ದರು.

**ಸಾಲು ಸುದ್ದಿ** ಶಿವಮೊಗ್ಗ: ಆ. 13ರಿಂದ 15ರ ವರೆಗೆ ಪ್ರತಿಯೊಬ್ಬರೂ ತಮ್ಮ ಮನೆ ಮೇಲೆ ತ್ರಿವರ್ಣ ಧ್ವಜ ಹಾರಿಸಿ ಹರ್ ಘರ್ ತಿರಂಗಾ ಅಭಿಯಾನ ಯಶಸ್ವಿಗೊಳಿಸುವಂತೆ ಎಡಿಸಿ ಡಾ.ನಾಗೇಂದ್ರ ಹೊನ್ನಳ್ಳಿ ತಿಳಿಸಿದ್ದಾರೆ.


## ಟಾಟಾ ಕ್ಯಾಪಿಟಲ್ ಹೌಸಿಂಗ್ ಫೈನಾನ್ಸ್ ಲಿಮಿಟೆಡ್

TATA

ನೋಂದಾಯಿತ ವಿಳಾಸ: 11 ನೇ ಮಹಡಿ, ಟವರ್ ಎ, ಪೆನಿನ್ಸುಲಾ ಬ್ಯುಸಿನೆಸ್ ಪಾರ್ಕ್, ಗಣಪತ್ ರಾವ್ ಕದಮ್ ಮಾರ್ಗ, ಲೋವರ್ ಪ್ಯಾರೆಲ್, ಮುಂಬೈ – 400013.
ಶಾಖೆ ವಿಳಾಸ: ಸಂಖ್ಯೆ 82/1, ನೆಲ ಮಹಡಿ, ಕೃಷ್ಣ ಟವರ್ಸ್, ರಿಚ್ಮಂಡ್ ರಸ್ತೆ, ಬೆಂಗಳೂರು – 560025.

**ಸ್ಥಿರಾಸ್ತಿಗಳ ಮಾರಾಟಕ್ಕೆ ಮಾರಾಟ ಸೂಚನೆ**
**[2002 ರ ಭದ್ರತಾ ಹಿತಾಸಕ್ತಿ (ಜಾರಿ) ನಿಯಮ 9(1) ಅಡಿಯಲ್ಲಿ]**

**2002 ರ ಆರ್ಥಿಕ ಸ್ವತ್ತುಗಳ ಭದ್ರತೆ ಮತ್ತು ಪುನರ್ ನಿರ್ಮಾಣ ಹಾಗೂ ಭದ್ರತಾ ಹಿತಾಸಕ್ತಿ ಜಾರಿಯಡಿ ಮತ್ತು 2002 ರ ಭದ್ರತಾ ಹಿತಾಸಕ್ತಿ (ಜಾರಿ) ನಿಯಮಗಳ ಅಧಿನಿಯಮ 9(1) ರಲ್ಲಿರುವ ನಿಬಂಧನೆಗಳನ್ನು ಓದಿಕೊಂಡಂತೆ ಸ್ಥಿರಾಸ್ತಿಗಳ ಮಾರಾಟಕ್ಕೆ ಜಾರಿಗೊಳಿಸಿರುವ ಇ –ಹರಾಜು ಮಾರಾಟ ಸೂಚನೆ.**

ಸಾಮಾನ್ಯ ಸಾರ್ವಜನಿಕರಿಗೆ ಮತ್ತು ವಿಶೇಷವಾಗಿ ಸಾಲಗಾರ(ರು) ಮತ್ತು / ಸಹ–ಸಾಲಗಾರ, ಅಥವಾ ಅವರ ಕಾನೂನು ಉತ್ತರಾಧಿಕಾರಿಗಳು / ಪ್ರತಿನಿಧಿಗಳಿಗೆ (ಸಾಲಗಾರರು) ಈ ನೋಟಿಸಿನ ಮೂಲಕ ತಿಳಿಸುವುದೇನೆಂದರೆ ಈ ಕೆಳಗೆ ವಿವರಿಸಲಾದ ಸ್ಥಿರಾಸ್ತಿಗಳನ್ನು ಟಾಟಾ ಕ್ಯಾಪಿಟಲ್ ಹೌಸಿಂಗ್ ಫೈನಾನ್ಸ್ ಲಿಮಿಟೆಡ್ (ಟಿಸಿಎಚ್‌ಎಫ್‌ಎಲ್) ಗೆ ಅಡಮಾನ ಮಾಡಲಾಗಿದ್ದು/ವಹಿಸಲಾಗಿದ್ದು, ಇವುಗಳ ಭೌತಿಕ ಸ್ವಾಧೀನತೆಯನ್ನು ಭದ್ರತಾ ಸಾಲದಾತರಾದ ಅಧಿಕೃತ ಅಧಿಕಾರಿ ಟಿಸಿಎಚ್‌ಎಫ್‌ಎಲ್ ಅವರು ಪಡೆದುಕೊಂಡಿದ್ದು, ಇವುಗಳನ್ನು "ಎಲ್ಲಿದೆಯೋ", "ಹೇಗಿದೆಯೋ", ಮತ್ತು "ಏನೇನಿದೆಯೋ" ಆಧಾರದ ಮೇಲೆ ಕೆಳಗಿನ ಸಾಲಗಾರ ಮತ್ತು ಸಹ–ಸಾಲಗಾರರಿಂದ ವಸೂಲಿ ಮಾಡುವ ಸಲುವಾಗಿ ದಿನಾಂಕ **25.08.2022 ರಂದು** ಮಾರಾಟ ಮಾಡಲಾಗುವುದು. ಮೀಸಲು ಬೆಲೆ ಮತ್ತು ಪ್ರಾರಂಭಿಕ ಠೇವಣಿ ಹಣ ಕೆಳಗೆ ಉಲ್ಲೇಖಿಸಲಾಗಿದೆ. ಈ ಮೂಲಕ ಸೂಚನೆ ನೀಡುವುದೇನೆಂದರೆ, ಯಾವುದೇ ಮುಂದೂಡಿಕೆ / ಮಾರಾಟದ ಸ್ಥಗಿತದ ಅನುಪಸ್ಥಿತಿಯಲ್ಲಿ, ಹೇಳಿದ ಭದ್ರತಾ ಆಸ್ತಿ / ಆಸ್ತಿಯನ್ನು ಇ–ಹರಾಜಿನ ಮೂಲಕ 25.08.2022 ರಂದು ಮಧ್ಯಾಹ್ನ 2 ಗಂಟೆಗೆ ಶಾಖೆಯ ವಿಳಾಸದಲ್ಲಿ ಟಾಟಾ ಕ್ಯಾಪಿಟಲ್ ಹೌಸಿಂಗ್ ಫೈನಾನ್ಸ್ ಲಿಮಿಟೆಡ್, ಸಂಖ್ಯೆ 82/1 , ನೆಲ ಮಹಡಿ, ಕೃಷ್ಣ ಟವರ್ಸ್, ರಿಚ್ಮಂಡ್ ರಸ್ತೆ, ಬೆಂಗಳೂರು – 560025 ಮಾರಾಟ ಮಾಡಲಾಗುವುದು. ಇ–ಹರಾಜಿನಲ್ಲಿ ಭಾಗವಹಿಸಲು ಇಎಂಡಿಯ ಡಿಮ್ಯಾಂಡ್ ಡ್ರಾಫ್ಟ್ ಹೊಂದಿರುವುದನ್ನು **23.08.2022** ರಂದು ಅಥವಾ ಮೊದಲು ಸಂಜೆ 5 ರೊಳಗೆ ಟಿಸಿಎಚ್‌ಎಫ್‌ಎಲ್ ನ ಅಧಿಕೃತ ಅಧಿಕಾರಿಗೆ ಸಲ್ಲಿಸಬೇಕು.
ಕೆಳಗೆ ವಿವರಿಸಿದ ಸಂಕ್ಷಿಪ್ತ ವಿವರಗಳ ಪ್ರಕಾರ ಭದ್ರತಾ ಆಸ್ತಿ/ಸ್ಥಿರಾಸ್ತಿಯ ಮಾರಾಟವು "ಹೇಗಿದೆಯೋ" ಸ್ಥಿತಿಯಲ್ಲಿ ಮೇಲೆ ಇರುತ್ತದೆ;

| ಕ್ರ. ಸಂ. | ಸಾಲ ಖಾತೆ ಸಂಖ್ಯೆ ಮತ್ತು ಶಾಖೆ | ಸಾಲಗಾರ (ರು)/ಸಹ–ಸಾಲಗಾರ(ರು), ಕಾನೂನು ಉತ್ತರಾಧಿಕಾರಿ (ಗಳು)/ ಕಾನೂನು ಪ್ರತಿನಿಧಿ/ ಜಾಮೀನುದಾರರ ಹೆಸರು | ಡಿಮ್ಯಾಂಡ್ ನೋಟಿಸಿನ ಪ್ರಕಾರ ಮೊತ್ತ ಮತ್ತು ಡಿಮ್ಯಾಂಡ್ ನೋಟಿಸಿನ ದಿನಾಂಕ | ಮೀಸಲು ಬೆಲೆ | ಪ್ರಾರಂಭಿಕ ಠೇವಣಿ ಹಣ |
|---|---|---|---|---|---|
| 1. | 10238975 | ಶ್ರೀ ಅಲ್ವಿನ್ ಮನೋಹರ್ (ಸಾಲಗಾರ) ಮತ್ತು ಶ್ರೀಮತಿ ಪ್ರಭಾವತಿ ಎ (ಸಹ ಸಾಲಗಾರರು) | 19.08.2021 ರಂತೆ ರೂ.4,10,265/– (ರೂಪಾಯಿ ನಾಲ್ಕು ಲಕ್ಷ ಹತ್ತು ಸಾವಿರದ ಇನ್ನೂರ ಅರವತ್ತೈದು ಮಾತ್ರ) | ರೂ. 14,76,000/– (ರೂಪಾಯಿ ಹದಿನಾಲ್ಕು ಲಕ್ಷ ಎಪ್ಪತ್ತಾರು ಸಾವಿರ ಮಾತ್ರ) | ರೂ. 1,47,600/– (ರೂಪಾಯಿ ಒಂದು ಲಕ್ಷ ನಲವತ್ತೇಳು ಸಾವಿರದ ಆರು ನೂರು ಮಾತ್ರ) |

**ಸ್ಥಿರಾಸ್ತಿಯ ವಿವರಣೆ:** ಎಲ್ಲಾ ಭಾಗ ವಿಭಾಗವು ಸೇರಿದಂತೆ ವಸತಿ ಆಸ್ತಿಯನ್ನು ಪರಿವರ್ತಿಸಿದ ಸೈಟ್ ನಂ.19, ಖಾತಾ ನಂ.3767/3767, ಯುಪಿಓಆರ್ ನಂ.ಎಸ್06–7528, ಪೂರ್ವದಿಂದ: 11.09 ಮೀಟರ್‌ಗಳು ಪಶ್ಚಿಮದಿಂದ: 3.03, ಮೀಟರ್‌ಗಳು, ಉತ್ತರದಿಂದ: 14.46 ಮೀಟರ್‌ಗಳು ಮತ್ತು ದಕ್ಷಿಣದಿಂದ: 12.00 ಮೀಟರ್‌ಗಳು ಸಂಪೂರ್ಣವಾಗಿ 93.40 ಚದರ ಮೀಟರ್‌ಗಳು (ಅಳತೆ 988 ಚದರ ಅಡಿ) ಅಳೆಯುವುದು . ಸೈ ನಂ.10 ರಲ್ಲಿ ಕೆತ್ತಲಾಗಿದೆ. "ಮ್ಯಾಕ್ಸ್ ಪೂರ್ಣೋದಯ" ಅನುಮೋದನೆ ಸಂಖ್ಯೆ.S231/09–10 ದಿನಾಂಕ 07/11/2016, ನವುಲೆ ಗ್ರಾಮ, ವಾರ್ಡ್ ನಂ.8, ನವುಲೆ ಕೆರೆಯಿಂದ ಕೃಷಿ ಕಾಲೇಜು ಬಲಭಾಗ, ಸವಳಂಗ ರಸ್ತೆ, ಶಿವಮೊಗ್ಗ ತಾಲೂಕು ಮತ್ತು ಚಕ್ಕುಬಂದಿ:– ಪೂರ್ವದಿಂದ: 9 ಮೀಟರ್. ರಸ್ತೆ, ಪಶ್ಚಿಮದಿಂದ: ಸೈಟ್ ಸಂಖ್ಯೆ. 35, ಉತ್ತರದಿಂದ: ಖಾಸಗಿ ಆಸ್ತಿ, ದಕ್ಷಿಣದಿಂದ: ಸೈಟ್ ಸಂಖ್ಯೆ.20.

ಹರಾಜಿನಲ್ಲಿ, ಸಾರ್ವಜನಿಕರಿಗೆ ಸಾಮಾನ್ಯವಾಗಿ ತಮ್ಮ ಬಿಡ್ (ಗಳನ್ನು) ವೈಯಕ್ತಿಕವಾಗಿ ಸಲ್ಲಿಸಲು ಆಹ್ವಾನಿಸಲಾಗುತ್ತದೆ. ಸಾಲಗಾರ(ರು) / ಸಹ–ಸಾಲಗಾರ (ರು) ಈ ನೋಟಿಸ್ ಪ್ರಕಟವಾದ ದಿನಾಂಕದಿಂದ 15 ದಿನಗಳಲ್ಲಿ ಒಟ್ಟು ಬಾಕಿ ಮೊತ್ತವನ್ನು ಹೆಚ್ಚಿನ ಬಡ್ಡಿಯೊಂದಿಗೆ ಪಾವತಿಸಲು ಕೊನೆಯ ಅವಕಾಶವನ್ನು ನೀಡಲಾಗಿದೆ, ವಿಫಲವಾದರೆ ಸ್ಥಿರ ಆಸ್ತಿಯನ್ನು ಶೆಡ್ಯೂಲ್ ಪ್ರಕಾರ ಮಾರಾಟ ಮಾಡಲಾಗುತ್ತದೆ. ಬಡ್ಡಿ ಮತ್ತು ವೆಚ್ಚಗಳೊಂದಿಗೆ (ಮಾರಾಟದ ವೆಚ್ಚವನ್ನು ಒಳಗೊಂಡಂತೆ) ಮೇಲೆ ತಿಳಿಸಿದ ಮೊತ್ತವನ್ನು ಪಾವತಿಸಿದರೆ ಅಥವಾ ಅಂತಹ ಸುರಕ್ಷಿತ ಸಾಲ, ಬಡ್ಡಿ ಮತ್ತು ವೆಚ್ಚಗಳನ್ನು ಪುರಾವೆಯೊಂದಿಗೆ ಅಧಿಕೃತ ಅಧಿಕಾರಿಗೆ ಹರಾಜಿನ ದಿನಾಂಕದ ಮೊದಲು ತಿಳಿಸಿದರೆ ಇ– ಹರಾಜನ್ನು ನಿಲ್ಲಿಸಲಾಗುತ್ತದೆ.
ಈ ಮಾರಾಟಕ್ಕೆ ಸಂಬಂಧಿಸಿದಂತೆ ಯಾವುದೇ ಕರ್ತವ್ಯವನ್ನು ಹೊಂದಿರುವ ಯಾವುದೇ ಅಧಿಕಾರಿ ಅಥವಾ ಇತರ ವ್ಯಕ್ತಿ, ಮಾರಾಟವಾದ ಸ್ಥಿರ ಆಸ್ತಿಯಲ್ಲಿ ಯಾವುದೇ ಆಸಕ್ತಿಯನ್ನು ನೇರವಾಗಿ ಅಥವಾ ಪರೋಕ್ಷವಾಗಿ ಬಿಡ್ ಮಾಡುವುದು, ಸ್ವಾಧೀನಪಡಿಸಿಕೊಳ್ಳುವುದು ಅಥವಾ ಪಡೆಯಲು ಪ್ರಯತ್ನಿಸುವುದಿಲ್ಲ.
ಮಾರಾಟವು ಭದ್ರತಾ ಆಸಕ್ತಿ (ಜಾರಿ) ನಿಯಮಗಳು, 2002 ರಲ್ಲಿ ಸೂಚಿಸಲಾದ ಷರತ್ತುಗಳಿಗೆ ಒಳಪಟ್ಟಿರುತ್ತದೆ ಮತ್ತು ಈ ಕೆಳಗಿನ ಹೆಚ್ಚಿನ ಷರತ್ತುಗಳಿಗೆ ಒಳಪಟ್ಟಿರುತ್ತದೆ:
**ಗಮನಿಸಿ:** ಇ–ಹರಾಜು https://bankauctions.in/ ಪೋರ್ಟಲ್ ಮೂಲಕ ದಿನಾಂಕ 25.08.2022 ರಂದು ಮಧ್ಯಾಹ್ನ 2.00 ರಿಂದ ಮಧ್ಯಾಹ್ನ 3.00 ರವರೆಗೆ ತಲಾ 10 ನಿಮಿಷಗಳ ಸೀಮಿತ ವಿಸ್ತರಣೆಯೊಂದಿಗೆ ನಡೆಯಲಿದೆ.
**ನಿಯಮ ಮತ್ತು ಷರತ್ತುಗಳು:**
**1.** ಕೆಳಗಿನ ಶೆಡ್ಯೂಲ್‌ನಲ್ಲಿ ಕೆಳಸಹಿದಾರರು ಅಧಿಕೃತ ಅಧಿಕಾರಿಯ ಉತ್ತಮ ಜ್ಞಾನ ಮತ್ತು ಮಾಹಿತಿಗೆ, ಸ್ವತ್ತಿಗೆ ಸಂಬಂಧಿಸಿದಂತೆ ಯಾವುದೇ ಅಡಚಣೆ ಇಲ್ಲ, ಆದರೆ ಈ ಘೋಷಣೆಯಲ್ಲಿ ಯಾವುದೇ ದೋಷ, ತಪ್ಪು ವಿವರಣೆ ಅಥವಾ ಲೋಪಕ್ಕೆ ಕೆಳಸಹಿದಾರರು ಉತ್ತರಿಸಲಾಗುವುದಿಲ್ಲ. ಮೊತ್ತದ ಬಿಡ್ ಅಥವಾ ಬಿಡ್ದಾರರ ಬಗ್ಗೆ ಯಾವುದೇ ವಿವಾದ ಉಂಟಾದಾಗ, ಸುರಕ್ಷಿತ ಸಾಲಗಾರನ ವಿವೇಚನೆಗೆ ಒಳಪಟ್ಟು ಲಾಟ್ ಅನ್ನು ಮತ್ತೊಮ್ಮೆ ಹರಾಜಿಗೆ ಇಡಲಾಗುತ್ತದೆ. **2.** ಆಸ್ತಿಯನ್ನು ಮೀಸಲು ಬೆಲೆಗಿಂತ ಕಡಿಮೆ ಬೆಲೆಗೆ ಮಾರಾಟ ಮಾಡಲಾಗುವುದಿಲ್ಲ. **3.** ಬಿಡ್ ಹೆಚ್ಚಳದ ಮೊತ್ತ ಹೀಗಿರುತ್ತದೆ: ರೂ. 10,000/– (ಹತ್ತು ಸಾವಿರ ಮಾತ್ರ) **4.** ಆಸ್ತಿಯ ಖರೀದಿಗೆ ಸಲ್ಲಿಸಿದ ಎಲ್ಲಾ ಬಿಡ್ಡುಗಳು ಡಿಮ್ಯಾಂಡ್ ಡ್ರಾಫ್ಟ್ ನ ಮೂಲಕ ಮೇಲೆ ತಿಳಿಸಿದಂತೆ ಅರ್ನೆಸ್ಟ್ ಮನಿ ಜೊತೆಗೂಡಿರುತ್ತವೆ ಫಲಾನುಭವಿ **"ಟಾಟಾ ಕ್ಯಾಪಿಟಲ್ ಹೌಸಿಂಗ್ ಫೈನಾನ್ಸ್ ಲಿಮಿಟೆಡ್"** ಪಾವತಿಸಬೇಕಾದ ಶಾಖೆ ವಿಳಾಸ – ಸಂಖ್ಯೆ 82/1, ನೆಲ ಮಹಡಿ, ಕೃಷ್ಣ ಟವರ್ಸ್, ರಿಚ್ಮಂಡ್ ರಸ್ತೆ, ಬೆಂಗಳೂರು – 560025. ಡಿಮ್ಯಾಂಡ್ ಡ್ರಾಫ್ಟ್‌ಗಳನ್ನು ಹರಾಜಿನ ನಂತರ ವಿಫಲ ಬಿಡ್ದಾರರಿಗೆ ಹಿಂತಿರುಗಿಸಲಾಗುತ್ತದೆ. **5.** ಅತ್ಯಧಿಕ ಬಿಡ್ದಾರರನ್ನು ಅವನು/ಅವಳು ಕಾನೂನುಬದ್ಧವಾಗಿ ಬಿಡ್ ಮಾಡಲು ಅರ್ಹತೆ ಹೊಂದಿದ್ದರಿಂದ ಯಶಸ್ವಿ ಬಿಡ್ದಾರ ಎಂದು ಘೋಷಿಸಲಾಗುತ್ತದೆ ಮತ್ತು ಮೊದಲೇ ಹೇಳಿದಂತೆ ಆಸ್ತಿಯನ್ನು ಮೀಸಲು ಬೆಲೆಗಿಂತ ಕಡಿಮೆ ಬೆಲೆಗೆ ಮಾರಾಟ ಮಾಡಲಾಗುವುದಿಲ್ಲ. ನೀಡಿರುವ ಬೆಲೆ ಸ್ಪಷ್ಟವಾಗಿ ಅಸಮರ್ಪಕವಾಗಿ ಕಾಣಿಸಿಕೊಂಡಾಗ ಅತ್ಯಧಿಕ ಬಿಡ್ನ ಸ್ವೀಕಾರವನ್ನು ನಿರಾಕರಿಸುವುದು 'ಅಧಿಕೃತ ಅಧಿಕಾರಿ'ಯ ವಿವೇಚನೆಗೆ ಒಳಪಟ್ಟಿರುತ್ತದೆ. **6.** ದಾಖಲಾದ ಕಾರಣಗಳಿಗಾಗಿ, ಮಾರಾಟವನ್ನು ಮುಂದೂಡುವುದು / ನಿಲ್ಲಿಸುವುದು ಅಧಿಕೃತ ಅಧಿಕಾರಿಯ ವಿವೇಚನೆಯಲ್ಲಿರುತ್ತದೆ **7.** ಸ್ಥಿರ ಆಸ್ತಿಯ ಪರಿಶೀಲನೆಯನ್ನು 17.08.2022 ರಂದು ಬೆಳಿಗ್ಗೆ 11 ರಿಂದ ಸಂಜೆ 5.00 ರವರೆಗೆ ಮಾಡಬಹುದು. **8.** ಯಶಸ್ವಿ ಬಿಡ್ದಾರನಾಗಿ ಘೋಷಿಸಲ್ಪಟ್ಟ ವ್ಯಕ್ತಿಯು, ಅಂತಹ ಘೋಷಣೆಯಾದ ಕೂಡಲೇ, ಖರೀದಿಯ ಹಣ/ಬಿಡ್ನ ಇಪ್ಪತ್ತೈದು ಶೇಕಡಾವನ್ನು ಠೇವಣಿ ಇಡಬೇಕು, ಅದು ಇಎಂಡಿ ಮೊತ್ತದ ಜೊತೆಗೆ ಅಧಿಕೃತ ಅಧಿಕಾರಿಗೆ 24 ಗಂಟೆಗಳ ಒಳಗೆ ಒಳಗೊಂಡಿರುತ್ತದೆ. ನಿಗದಿತ ಅವಧಿಯೊಳಗೆ ಮೊತ್ತವನ್ನು ಠೇವಣಿ ಇಡುವುದರಲ್ಲಿ ಯಾವುದೇ ವಿಫಲರಾದಲ್ಲಿ, ಆಸ್ತಿಯನ್ನು ಖಾಸಗಿ ಒಪ್ಪಂದದ ಮೂಲಕ ಹೊಸ ಹರಾಜು/ ಮಾರಾಟಕ್ಕೆ ಇಡಲಾಗುತ್ತದೆ. **9.** ಒಂದು ವೇಳೆ ಪ್ರಾಂಭಿಕ ಠೇವಣಿ ಮೇಲಿನಂತೆ ಮಾಡಿದರೆ, ಪಾವತಿಸಬೇಕಾದ ಖರೀದಿ ಹಣದ ಬಾಕಿ ಮೊತ್ತವನ್ನು ಖರೀದಿದಾರನು ಅಧಿಕೃತ ಅಧಿಕಾರಿಗೆ ಆಸ್ತಿ ಮಾರಾಟದ ದೃಢೀಕರಣದ ದಿನಾಂಕದಿಂದ 15 ನೇ ದಿನದ ಅಥವಾ ಮೊದಲು ಪಾವತಿಸಬೇಕು, ಅಥವಾ 15 ನೇ ದಿನ ಭಾನುವಾರ ಅಥವಾ ಇತರ ರಜಾದಿನವಾಗಿದ್ದರೆ, ಮೊದಲ ಕಚೇರಿ ದಿನದಂದು ಪಾವತಿಸಬೇಕು. **10.** ಮೇಲೆ ತಿಳಿಸಿದ ಅವಧಿಯೊಳಗೆ ಯಾವುದೇ ಪಾವತಿಸಲು ವಿಫಲವಾದರೆ, ಖಾಸಗಿ ಒಪ್ಪಂದದ ಮೂಲಕ ಆಸ್ತಿಯನ್ನು ಹೊಸ ಹರಾಜು / ಮಾರಾಟಕ್ಕೆ ಇಡಲಾಗುತ್ತದೆ. ಇಎಮ್ಡಿ ಸೇರಿದಂತೆ ಠೇವಣಿ ಟಾಟಾ ಕ್ಯಾಪಿಟಲ್ ಹೌಸಿಂಗ್ ಫೈನಾನ್ಸ್ ಲಿಮಿಟೆಡ್‌ನಿಂದ ಮುಟ್ಟುಗೋಲು ಹಾಕಿಕೊಳ್ಳುತ್ತದೆ ಮತ್ತು ಡಿಫಾಲ್ಟ್ ಖರೀದಿದಾರನು ಆಸ್ತಿಗೆ ಎಲ್ಲಾ ಹಕ್ಕುಗಳನ್ನು ಕಳೆದುಕೊಳ್ಳುತ್ತಾನೆ. **11.** ಟಾಟಾ ಕ್ಯಾಪಿಟಲ್ ಹೌಸಿಂಗ್ ಫೈನಾನ್ಸ್ ಲಿಮಿಟೆಡ್‌ಗೆ ತಿಳಿದಿರುವ ಯಾವುದೇ ಆಸ್ತಿಗಳ ವಿವರಗಳು, ಆಸ್ತಿಗೆ ಹೊಣೆಗಾರರಾಗಿರುತ್ತಾರೆ: ಇಲ್ಲ. ಹಕ್ಕುಗಳು, ಯಾವುದಾದರೂ ಇದ್ದರೆ, ಅದನ್ನು ಆಸ್ತಿಗೆ ಮುಂದಿಡಲಾಗಿದೆ ಮತ್ತು ಅದರ ಸ್ವರೂಪ ಮತ್ತು ಮೌಲ್ಯವನ್ನು ಹೊಂದಿರುವ ಯಾವುದೇ ಇತರ ವಿವರಗಳು: ಇಲ್ಲ. ಆಸ್ತಿ ತೆರಿಗೆ, ವಿದ್ಯುತ್ ಇತ್ಯಾದಿಗಳ ಶಾಸನಬದ್ಧ ಹೊಣೆಗಾರಿಕೆಗಳು ಸೇರಿದಂತೆ ಆಸ್ತಿಯ ಮೇಲಿನ ವಿವರಗಳ ಬಗ್ಗೆ ತಮ್ಮದೇ ಆದ ಸ್ವತಂತ್ರ ವಿಚಾರಣೆ ನಡೆಸಲು ಉದ್ದೇಶಿತ ಬಿಡ್ದಾರರಿಗೆ ಸೂಚಿಸಲಾಗಿದೆ. **12.** ಬೇರೆ ಯಾವುದೇ ವಿವರಗಳಿಗಾಗಿ ಅಥವಾ ಇ–ಹರಾಜಿನ ಕಾರ್ಯವಿಧಾನದ ಆನ್ಲೈನ್ ತರಬೇತಿಗಾಗಿ ನಿರೀಕ್ಷಿತ ಬಿಡ್ದಾರರು ಸೇವಾ ಪೂರೈಕೆದಾರ M/s. 4 ಕ್ಲೋಸರ್, ಬ್ಲಾಕ್ ನಂ.605 ಎ, 6 ನೇ ಮಹಡಿ, ಮೈತ್ರಿವನಂ ವಾಣಿಜ್ಯ ಸಂಕೀರ್ಣ, ಅಮೀರಪೇಟ್, ಹೈದರಾಬಾದ್ – 500038 ಅದರ ಸಂಯೋಜಕರಾದ ಶ್ರೀ ಯು.ಸುಬ್ಬರಾವ್, ಮೊ.ಸಂ.8142000061, subbarao@bankauctions.in ಅಥವಾ ಮನೀಶ್ ಬನ್ಸಾಲ್, ಇಮೇಲ್ ಐಡಿ Manish.Bansal@tatacapital.com ಅಧಿಕೃತ ಅಧಿಕಾರಿ ಮೊಬೈಲ್ ಸಂಖ್ಯೆ 8588983696. ದಯವಿಟ್ಟು ನಿಮ್ಮ ಪ್ರಶ್ನೆಯನ್ನು ವಾಟ್ಸಾಪ್ ಸಂಖ್ಯೆ – 9999078669 ಗೆ ಕಳುಹಿಸಿ. **13.** 1% ರಷ್ಟು TDS ಅನ್ವಯಿಸುತ್ತದೆ ಮತ್ತು ಅತಿ ಹೆಚ್ಚು ಬಿಡ್ ಮಾಡಿದವರು ಹೆಚ್ಚಿನ ಘೋಷಿತ ಬಿಡ್ ಮೊತ್ತಕ್ಕಿಂತ ಪಾವತಿಸಬೇಕಾಗುತ್ತದೆ. ಮಾಲೀಕರು/ಸಾಲಗಾರ(ಗಳ) ಪ್ಯಾನ್ನಲ್ಲಿ ಅತಿ ಹೆಚ್ಚು ಬಿಡ್ ಮಾಡಿದವರು ಪಾವತಿಯನ್ನು ಠೇವಣಿ ಮಾಡಬೇಕಾಗುತ್ತದೆ ಮತ್ತು ಚಲನ್ನ ಪ್ರತಿಯನ್ನು ನಮ್ಮ ಕಂಪನಿಗೆ ಸಲ್ಲಿಸಬೇಕು. **14.** ಮೇಲಿನ ವಿವರಗಳಿಗಾಗಿ ದಯವಿಟ್ಟು ಸುರಕ್ಷಿತ ಸಾಲಗಾರರ ವೆಬ್ಸೈಟ್ www.https://bit.ly/3b00Ulp ಯಲ್ಲಿ ಒದಗಿಸಲಾದ ಲಿಂಕ್ ಅನ್ನು ನೋಡಿ.
**ದಯವಿಟ್ಟು ಗಮನಿಸಿ** – ಈ ಆಸ್ತಿಯ ಮಾರಾಟ / ಹರಾಜಿನಲ್ಲಿ ಪ್ರಸ್ತಾಪಿಸಲಾದ ಹರಾಜು ಪಾಲುದಾರನನ್ನು ಹೊರತುಪಡಿಸಿ ಯಾವುದೇ ಬ್ರೋಕರ್ / ಏಜೆಂಟರನ್ನು ಟಿಸಿಎಚ್‌ಎಫ್‌ಎಲ್ ತೊಡಗಿಸಿಕೊಂಡಿಲ್ಲ. ಆಸಕ್ತ ವ್ಯಕ್ತಿಗಳು ಈ ವಿಷಯದಲ್ಲಿ ಎಲ್ಲಾ ಪ್ರಶ್ನೆಗಳು ಮತ್ತು ವಿಚಾರಣೆಗಾಗಿ ಕೆಳಸಹಿದಾರರು ಅಥವಾ ಅಧಿಕೃತ ಅಧಿಕಾರಿಯನ್ನು ಮಾತ್ರ ಸಂಪರ್ಕಿಸಬೇಕು.

ಸ್ಥಳ : ಶಿವಮೊಗ್ಗ
ದಿನಾಂಕ : 04.08.2022

ಸಹಿ/ – ಅಧಿಕೃತ ಅಧಿಕಾರಿ
ಟಾಟಾ ಕ್ಯಾಪಿಟಲ್ ಹೌಸಿಂಗ್ ಫೈನಾನ್ಸ್ ಲಿಮಿಟೆಡ್.,


# ದಸರಾ ಉತ್ಸವ ಪೂರ್ವಭಾವಿ ಸಭೆ

**ಚಂದ್ರಗುತ್ತಿ:** ಶ್ರೀ ರೇಣುಕಾಂಬಾದೇವಿ ದಸರಾ ಉತ್ಸವ ಆಚರಣಾ ಸಮಿತಿ ವತಿಯಿಂದ ನಡೆಸುತ್ತಿರುವ 2022ನೇ ಸಾಲಿನ 7ನೇ ವರ್ಷದ ದಸರಾ ಉತ್ಸವದ ಪೂರ್ವಭಾವಿ ಸಭೆ ಸಮಿತಿ ಅಧ್ಯಕ್ಷ ಆರ್. ಶ್ರೀಧರ್ ಹುಲ್ತಿಕೊಪ್ಪ ಅಧ್ಯಕ್ಷತೆಯಲ್ಲಿ ಚಂದ್ರಗುತ್ತಿಯಲ್ಲಿ ನಡೆಯಿತು.

ಸಭೆ ಅಧ್ಯಕ್ಷತೆ ವಹಿಸಿದ ಆರ್. ಶ್ರೀಧರ್ ಹುಲ್ತಿಕೊಪ್ಪ ಮಾತನಾಡಿ, ಕಳೆದ ಆರು ವರ್ಷಗಳಿಂದಲೂ ದಸರಾ ಉತ್ಸವ ನಡೆಸಿಕೊಂಡು ಬಂದಂತೆ ಈ ವರ್ಷವೂ ಅದ್ದೂರಿಯಿಂದ ಸಾಂಸ್ಕೃತಿಕ ಉತ್ಸವ ನಡೆಸಲು ಸಭೆಯಲ್ಲಿ ಚರ್ಚಿಸಿ ಕಾರ್ಯಕ್ರಮದ ರೂಪುರೇಷೆಗಳ ಸಿದ್ಧತೆಗೆ ಚಾಲನೆ ನೀಡಿದ್ದೇವೆ. ಹಾಜರಿದ್ದ ಸದಸ್ಯರೆಲ್ಲರೂ ಕಾರ್ಯಕ್ರಮ ಯಶಸ್ಸಿಗೆ ಸಲಹೆ ಸಹಕಾರ ನೀಡಿದ್ದಾರೆ ಎಂದರು.

ಉಪಾಧ್ಯಕ್ಷ ರಾಮಣ್ಣ ಎಂ. ಸ್ವಾದಿ, ಗ್ರಾಪಂ ಅಧ್ಯಕ್ಷ ರತ್ನಾಕರ್ ಎಂ.ಪಿ., ಸದಸ್ಯರಾದ ರೇಣುಕಾ ಪ್ರಸಾದ್ ಎಂ.ಬಿ., ಸಮಿತಿ ಪ್ರಧಾನ ಕಾರ್ಯದರ್ಶಿ ಪ್ರಜ್ವಲ್ ಚಂದ್ರಗುತ್ತಿ, ಖಜಾಂಚಿ ವಸಂತ್ ಶೇಟ್, ಮಂಜುನಾಥ್ ಶೆಣೈ, ನಿರಂಜನ ಅರ್ಚಕ್, ಯಶವಂತಪ್ಪ, ಗಣಪತಿ, ಪ್ರಕಾಶ್ ಮಿರ್ಜಿ, ಪ್ರಕಾಶ್ ಎನ್., ರೇಣುಕಾಶ್ರೀಧರ್, ಭರತ್, ರಾಘವೇಂದ್ರ, ಧರ್ಮಲಿಂಗಂ ಇದ್ದರು.

ಚಂದ್ರಗುತ್ತಿಯಲ್ಲಿ ಶ್ರೀ ರೇಣುಕಾಂಬಾದೇವಿ ದಸರಾ ಉತ್ಸವ ಆಚರಣಾ ಸಮಿತಿ ವತಿಯಿಂದ ನಡೆಸುತ್ತಿರುವ 2022ನೇ ಸಾಲಿನ 7ನೇ ವರ್ಷದ ದಸರಾ ಉತ್ಸವದ ಪೂರ್ವಭಾವಿ ಸಭೆ ನಡೆಸಲಾಯಿತು.

# ಮೆಗ್ಗಾನ್ ಆಸ್ಪತ್ರೆ ವಿರುದ್ಧ ಪ್ರತಿಭಟನೆ

ಶಿವಮೊಗ್ಗದಲ್ಲಿ ಮೆಗ್ಗಾನ್ ಆಸ್ಪತ್ರೆಯಲ್ಲಿ ರೋಗಿಗಳಿಗೆ ಸಮರ್ಪಕವಾಗಿ ಚಿಕಿತ್ಸೆ ನೀಡುತ್ತಿಲ್ಲ ಎಂದು ಆರೋಪಿಸಿ ಕದಂಬ ಕನ್ನಡ ವೇದಿಕೆ ಡಿಸಿ ಕಚೇರಿ ಮುಂಭಾಗ ಪ್ರತಿಭಟನೆ ನಡೆಸಿದರು.

**ಶಿವಮೊಗ್ಗ:** ಮೆಗ್ಗಾನ್ ಆಸ್ಪತ್ರೆಯಲ್ಲಿ ರೋಗಿಗಳಿಗೆ ಸಮರ್ಪಕವಾಗಿ ಚಿಕಿತ್ಸೆ ನೀಡುತ್ತಿಲ್ಲ ಎಂದು ಆರೋಪಿಸಿ ಕದಂಬ ಕನ್ನಡ ವೇದಿಕೆ ಡಿಸಿ ಕಚೇರಿ ಎದುರು ಪ್ರತಿಭಟನೆ ನಡೆಸಿ ಮನವಿ ಸಲ್ಲಿಸಲಾಯಿತು.

ಜಿಲ್ಲಾ ಮೆಗ್ಗಾನ್ ಆಸ್ಪತ್ರೆ ಬಡವರಿಗೆ ನೆರವಾಗುವ ಆಸ್ಪತ್ರೆ. ಇಲ್ಲಿ ರೋಗಿಗಳಿಗೆ ಉತ್ತಮವಾದ ಚಿಕಿತ್ಸೆ ಸಿಗುತ್ತಿಲ್ಲ. ರೋಗಿಗಳ ಜೊತೆ ವೈದ್ಯರು ಸಿಬ್ಬಂದಿ ನಿರ್ಲಕ್ಷ್ಯ ತೋರಿ ಜೀವದ ಜೊತೆ ಆಟವಾಡುತ್ತಿದ್ದಾರೆ ಎಂದು ಪ್ರತಿಭಟನಾಕಾರರು ಆಕ್ರೋಶ ವ್ಯಕ್ತಪಡಿಸಿದರು.

ಮೆಗ್ಗಾನ್ ಆಸ್ಪತ್ರೆಯಲ್ಲಿ ಗುತ್ತಿಗೆ ಆಧಾರದಲ್ಲಿ ಕೆಲಸ ಮಾಡುವವರು ಇದ್ದಾರೆ. ತರಬೇತಿ ಹಂತದಲ್ಲಿರುವ ನರ್ಸಿಂಗ್ ವಿದ್ಯಾರ್ಥಿಗಳು ಇದ್ದಾರೆ. ಹೌಸ್ ಕೀಪಿಂಗ್ ವಿಭಾಗದಲ್ಲೂ ಗುತ್ತಿಗೆ ಕೆಲಸಗಾರರಿದ್ದಾರೆ. ಇವರಿಗೆ ಯಾವುದೇ ಮುಖ್ಯ ಜವಾಬ್ದಾರಿ ಇರುವುದಿಲ್ಲ. ಬೇಜವಾಬ್ದಾರಿ ತೋರಿಸುತ್ತಾರೆ ಎಂದು ದೂರಿದರು. ಸಾರ್ವಜನಿಕರು ಈ ಆಸ್ಪತೆಯಲ್ಲಿ ಚಿಕಿತ್ಸೆ ಪಡೆಯಲು ಭಯ ಪಡುತ್ತಿದ್ದಾರೆ. ಜೊತೆಗೆ ಮೂಲಸೌಲಭ್ಯಗಳು ಇಲ್ಲ. ಹಿರಿಯ ಅಧಿಕಾರಿಗಳು ಖುದ್ದಾಗಿ ಪರಿಶೀಲನೆ ನಡೆಸಬೇಕು. ಅಸಮರ್ಪಕವಾಗಿರುವ ವ್ಯವಸ್ಥೆ ಸರಿಪಡಿಸಿ ಸಾರ್ವಜನಿಕರಿಗೆ ಉತ್ತಮ ಚಿಕಿತ್ಸೆ ನೀಡಬೇಕು ಎಂದು ಮನವಿಯಲ್ಲಿ ಆಗ್ರಹಿಸಲಾಗಿದೆ. ಕದಂಬ ಕನ್ನಡ ವೇದಿಕೆ ರಾಜ್ಯಾಧ್ಯಕ್ಷ ವಿಶ್ವನಾಥಗೌಡ, ಪ್ರಮುಖರಾದ ನವೀನ್, ಲಕ್ಮೀಶ, ಸತೀಶ್, ಸಂತೋಷ್, ಶಿವಣ್ಣ, ಮಂಜುನಾಯ್ಕ, ಗಂಗಾಧರ ಇದ್ದರು.

# ಕೌಶಲ್ಯ ತರಬೇತಿಗೆ ಪ್ರಚಾರ ನೀಡಿ

**ಶಿವಮೊಗ್ಗ:** ಅಲ್ಪಸಂಖ್ಯಾತರಿಗೆ ಲಭ್ಯವಿರುವ ವಿದ್ಯಾರ್ಥಿವೇತನ, ಸ್ವಯಂ ಉದ್ಯೋಗ, ಕೌಶಲ್ಯಾಭಿವೃದ್ದಿ ಸೇರಿದಂತೆ ವಿವಿಧ ಯೋಜನೆಗಳ ಕುರಿತು ಹೆಚ್ಚಿನ ಪ್ರಚಾರ ನೀಡಿ, ಫಲಾನುಭವಿಗಳು ಇವುಗಳ ಉಪಯೋಗ ಪಡೆಯುವಂತೆ ಮಾಡಬೇಕೆಂದು ಡಿಸಿ ಡಾ.ಆರ್. ಸೆಲ್ವಮಣಿ ಸಂಬಂಧಿಸಿದ ಅಧಿಕಾರಿಗಳಿಗೆ ಸೂಚನೆ ನೀಡಿದರು.

ಜಿಲ್ಲಾಡಳಿತ ಕಚೇರಿ ಸಭಾಂಗಣದಲ್ಲಿ ಏರ್ಪಡಿಸಲಾಗಿದ್ದ ಅಲ್ಪಸಂಖ್ಯಾತರ ಕಲ್ಯಾಣಕ್ಕಾಗಿ ಪ್ರಧಾನಮಂತ್ರಿಗಳ ಹೊಸ 15 ಅಂಶಗಳ ಕಾರ್ಯಕ್ರಮದ ಜಿಲ್ಲಾ ಮಟ್ಟದ ತ್ರೈಮಾಸಿಕ ಪ್ರಗತಿ ಪರಿಶೀಲನಾ ಸಭೆ ಅಧ್ಯಕ್ಷತೆವಹಿಸಿ ಮಾತನಾಡಿ, ಶಿಕ್ಷಣ ಇಲಾಖೆ, ಅಲ್ಪಸಂಖ್ಯಾತರ ಇಲಾಖೆಗಳು ಸಮನ್ವಯ ಸಾಧಿಸಿ ಅಲ್ಪಸಂಖ್ಯಾತ ಮುಸ್ಲಿಂ ವಿದ್ಯಾರ್ಥಿಗಳಿಗೆ ಲಭ್ಯವಿರುವ ವಿವಿಧ ರೀತಿಯ ವಿದ್ಯಾರ್ಥಿವೇತನಗಳ ಬಗ್ಗೆ ಹೆಚ್ಚಿನ ಪ್ರಚಾರ ನೀಡಬೇಕು. ಆ ಮೂಲಕ ಹೆಚ್ಚಿನ ವಿದ್ಯಾರ್ಥಿಗಳು ಇದರ ಉಪಯೋಗ ಪಡೆಯುವಂತೆ ಆಗಬೇಕು.

ಕೌಶಲ್ಯಾಭಿವೃದ್ದಿ ಇಲಾಖೆ, ಜಿಲ್ಲಾ ಕೈಗಾರಿಕಾ ಕೇಂದ್ರ, ಇತರೆ ಇಲಾಖೆಗಳು ಇವರಿಗೆ ಲಭ್ಯವಿರುವ ಕೌಶಲ್ಯಾಭಿವೃದ್ದಿ, ಉದ್ಯಮಶೀಲತೆ ತರಬೇತಿ, ಸ್ವಂತ ಉದ್ಯೋಗ ಕೈಗೊಳ್ಳಲು ಅಗತ್ಯವಾದ ಸಾಲ ಯೋಜನೆಗಳ ಬಗ್ಗೆ ಹೆಚ್ಚಿನ ಪ್ರಚಾರ ನೀಡಬೇಕು. ಪ್ರಧಾನಮಂತ್ರಿಗಳ ಹೊಸ 15 ಅಂಶಗಳ ಕಾರ್ಯಕ್ರಮ ಸಮಿತಿ ನಾಮನಿರ್ದೇಶಿತ ಸದಸ್ಯರು ಸಹ ಈ ಬಗ್ಗೆ ತಮ್ಮ ಸಮುದಾಯದಲ್ಲಿ ತಿಳಿಸಬೇಕು ಎಂದರು. ಎಸ್ಪಿ ನಿಯಮಿತವಾಗಿ ಮೌಲ್ವಿಗಳೊಂದಿಗೆ ಸಭೆ ನಡೆಸುತ್ತಿದ್ದು, ಮೌಲ್ವಿಯವರ ಮೂಲಕ ಸಹ ಸಮುದಾಯಕ್ಕೆ ಈ ವಿಚಾರಗಳ ಬಗ್ಗೆ ತಿಳಿಸುವಂತೆ ಅವರು ಕೋರಿದರು. ವಿದ್ಯಾರ್ಥಿಗಳಿಲ್ಲದೇ ಖಾಲಿ ಇರುವ ನಗರದ ಅಲ್ಪಸಂಖ್ಯಾತ ಹಾಸ್ಟೆಲ್‌ನ್ನು ಅಲ್ಪಸಂಖ್ಯಾತ ಇಲಾಖೆ ಅಧಿಕಾರಿಗಳು ಶೀಘ್ರ, ತಮ್ಮ ಸ್ವಾಧೀನಕ್ಕೆ ತೆಗೆದುಕೊಂಡು ಸಣ್ಣ ಪುಟ್ಟ ರಿಪೇರಿ ಮಾಡಿಸಿ ಇನ್ನು 15 ದಿನಗಳ ಒಳಗೆ ಸಿದ್ದಪಡಿಸಬೇಕು. ಇಲ್ಲವಾದಲ್ಲಿ ಸದರಿ ಹಾಸ್ಟೆಲ್‌ನ್ನು ಇತರೆ ಅವಶ್ಯಕತೆ ಇರುವ ಇಲಾಖೆಗೆ ನೀಡಲಾಗುವುದು ಎಂದು ತಿಳಿಸಿದರು.

ಜಿಪಂ ಉಪ ಕಾರ್ಯದರ್ಶಿ ಮಲ್ಲಿಕಾರ್ಜುನ್, ಜಿ.ಪಂ ಯೋಜನಾ ನಿರ್ದೇಶಕಿ ನಂದಿನಿ, ಸಮಿತಿ ನಾಮನಿರ್ದೇಶಿತ ಸದಸ್ಯರಾದ ಮನ್ಸೂರ್ ಮಿರಾನ್, ಅಮ್ಜದ್ ಖಾನ್ ಇದ್ದರು.



# ನೂತನ ಕೋರ್ಸ್ ಆರಂಭ

**ಶಿವಮೊಗ್ಗ:** ಜೆಎನ್‌ಎನ್ ಎಂಜಿನಿಯರಿಂಗ್ ಕಾಲೇಜಿನಲ್ಲಿ ರೊಬೊಟಿಕ್ಸ್ ಮತ್ತು ಆರ್ಟಿಫೀಷಿಯಲ್ ಇಂಟಲಿಜೆನ್ಸ್ ನೂತನ ಕೋರ್ಸ್ ಆರಂಭವಾಗಿದೆ ಎಂದು ಕಾಲೇಜಿನ ಪ್ರಾಂಶುಪಾಲ ಡಾ.ಕೆ. ನಾಗೇಂದ್ರ ಪ್ರಸಾದ್ ಹೇಳಿದರು.

ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ರೊಬೊಟಿಕ್ಸ್ ಮತ್ತು ಆರ್ಟಿಫೀಷಿಯಲ್ ಇಂಟಲಿಜೆನ್ಸ್ ವಿಭಾಗ ನಮ್ಮ ಕಾಲೇಜಿನಲ್ಲಿ ಪ್ರಾರಂಭಿಸಲಾಗಿದ್ದು, ಮಲೆನಾಡಿನ ಭಾಗದಲ್ಲಿಯೇ ವಿಶೇಷವಾದ ಕೋರ್ಸ್ ಇದಾಗಿದೆ ಎಂದರು.

ಆಟೋಮೇಷನ್ ಕ್ಷೇತ್ರದಲ್ಲಿ ರೊಬೊಟಿಕ್ಸ್ ಮತ್ತು ಆರ್ಟಿಫೀಷಿಯಲ್ ಇಂಟಲಿಜೆನ್ಸ್ ಪ್ರಮುಖ ಪಾತ್ರ ಪಡೆದುಕೊಂಡಿದೆ. ಉತ್ಪಾದನಾ ಕ್ಷೇತ್ರದಲ್ಲಿ ರೊಬೊಗಳು ಕೃತಕ ಬುದ್ಧಿಮತ್ತೆ ತಂತ್ರಜ್ಞಾನದೊಂದಿಗೆ ಅನೇಕ ಉತ್ಪಾದನಾ ಸವಾಲು ಪರಿಹರಿಸುವಲ್ಲಿ ಯಶಸ್ವಿಯಾಗಿದೆ ಎಂದರು. ಬಹುತೇಕ ಕಂಪನಿಗಳು ಹಾಗೂ ಕಾರ್ಖಾನೆಗಳು ರೊಬೊಟಿಕ್ಸ್ ತಂತ್ರಜ್ಞಾನ ಅಳವಡಿಸಿಕೊಂಡಿದ್ದು, ಅಧಿಕ ನಾವಿನ್ಯಯುತ ಉದ್ಯೋಗವಕಾಶಗಳು ಲಭ್ಯವಿದೆ. ಈ ಹಿನ್ನೆಲೆಯಲ್ಲಿಯೇ ಜೆಎನ್‌ಎನ್ ಎಂಜಿನಿಯರಿಂಗ್ ಕಾಲೇಜು ನೂತನ ವಿಭಾಗ ಪ್ರಾರಂಭಿಸಿದೆ ಎಂದರು.

ಈಗಾಗಲೇ ಕಾಲೇಜಿನಲ್ಲಿ ರೊಬೋಟ್, ತ್ರಿಡಿ ಪ್ರಿಂಟರ್ ರೊಬೊಟ್ ಸಿಎನ್‌ಸಿ ಇಂಟರ್ಫೇಸ್ ಸೌಲಭ್ಯಗಳು ಲಭ್ಯವಿದ್ದು ಪರಿಣಾಮಕಾರಿ ಕಲಿಕೆಗೆ ಉನ್ನತ ವಾತಾವರಣ ನಿರ್ಮಾಣ ಮಾಡಿದೆ ಎಂದರು.

ರಾಷ್ಟ್ರೀಯ ಶಿಕ್ಷಣ ಸಮಿತಿ ಕುಲಸಚಿವ ಪ್ರೊ. ಟಿ.ಎಸ್. ಹೂವಯ್ಯಗೌಡ, ಕಾಲೇಜಿನ ಶೈಕ್ಷಣಿಕ ಡೀನ್ ಡಾ. ಪಿ. ಮಂಜುನಾಥ, ಮೆಕ್ಯಾನಿಕಲ್ ವಿಭಾಗದ ಮುಖ್ಯಸ್ಥರಾದ ಡಾ. ಈ. ಬಸವರಾಜ್, ಸಾರ್ವಜನಿಕ ಸಂಪರ್ಕಾಧಿಕಾರಿ ಸಿ.ಎಂ. ನೃಪತುಂಗ ಇದ್ದರು.


ಸಂಯುಕ್ತ ಕರ್ನಾಟಕ ಕ್ಲಾಸಿಫೈಡ್ಸ್
ಸಂಪರ್ಕಿಸಿ: 9036213209/ 9740809407
Email: skadvtblr@gmail.com

**ಓದುಗರ ಗಮನಕ್ಕೆ**
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸ ಪೂರ್ಣವೇ ಆದರೂ, ಅವುಗಳಲ್ಲಿನ ಮಾಹಿತಿ, ವಸ್ತುಲೋಪ– ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತು ದಾರರೊಡನೆಯೇ ವ್ಯವಹರಿಸ ಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
–ಜಾಹೀರಾತು ವ್ಯವಸ್ಥಾಪಕರು

**ವಶೀಕರಣ ಸ್ಪೆಷಲಿಸ್ಟ್**

ಶ್ರೀ ದುರ್ಗಾದೇವಿಯ ದೈವಿಕ ಶಕ್ತಿಯಿಂದ ಆರೋಗ್ಯ, ಸಂತಾನ, ದಾಂಪತ್ಯ ತೊಂದರೆ, ಶತ್ರುಕಾಟ, ಮದುವೆ, ಪ್ರೀತಿಯಲ್ಲಿ ಮೋಸ ಇನ್ನೂ ಎಂತಹ ಘೋರ ಸಮಸ್ಯೆಗಳಾಗೂ ತಾಯಿ ದುರ್ಗಾದೇವಿಯ ತ್ರಿಶೂಲ ದಿಗ್ಬಂಧನ ಮಾಂತ್ರಿಕ ಪೂಜೆಗಳಿಂದ ನಿಮ್ಮ ಸಮಸ್ಯೆ ಪರಿಹಾರ ಶತಃಸಿದ್ಧ.
ವಿ.ಸೂ: ಗಂಧರ್ವ ಸಮ್ಮೋಹಿನಿ ಯಂತ್ರಗಳಿಂದ 3 ದಿನದಲ್ಲಿ ಸ್ತ್ರೀ-ಪುರುಷ ವಶೀಕರಣ ಮಾಡಿಕೊಡುತ್ತಾರೆ.
ಫೋನಿನ ಮೂಲಕ ನೇರ ಪರಿಹಾರ
ಪಂಡಿತ್ ಶ್ರೀ ಅಚಾರ್ಯ:
9945995681


# ಧ್ವಜ ನಿಯಮಗಳ ಬಗ್ಗೆ ಮಾಹಿತಿ ಕಾರ್ಯಗಾರ

**ಸೊರಬ:** ರಾಷ್ಟ್ರಧ್ವಜ, ರಾಷ್ಟ್ರಗೀತೆ, ಧ್ವಜವಂದನೆ, ಧ್ವಜ ಸಂಹಿತೆ, ಧ್ವಜ ಸಂರಕ್ಷಣೆಯ ನಿಯಮಗಳ ಬಗ್ಗೆ ಮಾಹಿತಿ ಕಾರ್ಯಗಾರ ಆಯೋಜಿಸಿ ಎಂದು ಕನ್ನಡ ಸಾಹಿತ್ಯ ಸಾಂಸ್ಕೃತಿಕ ವೇದಿಕೆ ಅಧ್ಯಕ್ಷ ಶಂಕರ್ ಶೇಟ್ ಹೇಳಿದರು.

ಜನಸಂಗ್ರಾಮ ಪರಿಷತ್, ಯುವಾ ಬ್ರಿಗೇಡ್ ಹಾಗೂ ನಮ್ಮೂರು ಸಮುದಾಯ ಅಭಿವೃದ್ಧಿ ಸಂಸ್ಥೆ ವತಿಯಿಂದ ಸೊರಬ ತಾಲೂಕು ಕಚೇರಿಯಲ್ಲಿ ಜಿಲ್ಲಾಧಿಕಾರಿಗೆ ಮನವಿ ಪತ್ರ ಸಲ್ಲಿಸಿ ಮಾತನಾಡಿ, ಸ್ವತಂತ್ರ ಬಂದು 75 ವರ್ಷಗಳು ಕಳೆದಿವೆ. ಈ ಸಂದರ್ಭ ಸರ್ಕಾರದ ವತಿಯಿಂದ ಅಮೃತ ಮಹೋತ್ಸವ ವಿಜೃಂಭಣೆಯಿಂದ ಆಚರಿಸುತ್ತಿರುವುದು ಸಂತಸದ ವಿಚಾರ. ಹರ್ ಘರ್ ತಿರಂಗ ಅಭಿಯಾನದ ಅಂಗವಾಗಿ ಎಲ್ಲಾ ಕಡೆ ಧ್ವಜಾರೋಹಣ ಮಾಡಬೇಕಾಗಿರುವುದರಿಂದ ಜನರಲ್ಲಿ ಸಾಕಷ್ಟು ತಿಳುವಳಿಕೆ ಇಲ್ಲ. ಧ್ವಜ ಕಟ್ಟಲು ಹಿಂಜರಿಕೆ ಮಾಡುತ್ತಾರೆ. ಹೀಗಾಗಿ, ತಾಲೂಕು ಆಡಳಿತ, ರಾಷ್ಟ್ರೀಯ ಹಬ್ಬಗಳ ಆಚರಣಾ ಸಮಿತಿ ವತಿಯಿಂದ ರಾಷ್ಟ್ರಧ್ವಜ, ರಾಷ್ಟ್ರಗೀತೆಯ ಇತಿಹಾಸ, ಧ್ವಜ ಸಂಹಿತೆ, ಧ್ವಜ ಸಂರಕ್ಷಣೆಯ ನಿಯಮಗಳ ಬಗ್ಗೆ ಮಾಹಿತಿ ನುರಿತ ಸಂಪನ್ಮೂಲ ವ್ಯಕ್ತಿಗಳಿಂದ ಒಂದು ದಿನದ ಕಾರ್ಯಗಾರ ಆಯೋಜಿಸಬೇಕು ಎಂದು ಮನವಿ ಸಲ್ಲಿಸಲಾಯಿತು.

ತಹಸೀಲ್ದಾರ್ ಶೋಭಲಕ್ಷ್ಮಿ, ಯುವಾ ಬ್ರಿಗೇಡ್ ಸಂಚಾಲಕ ಮಹೇಶ್ ಖಾರ್ವಿ, ನಮ್ಮೂರು ಸಂಸ್ಥೆಯ ರಾಘವೇಂದ್ರ, ಅಕ್ಕನ ಬಳಗದ ಅಧ್ಯಕ್ಷೆ ರೇಣುಕಮ್ಮ ಗೌಳಿ, ಸ್ನೇಹ ಸುರಭಿ ಮಹಿಳಾ ಸಂಘದ ಸರಸ್ವತಿ ನಾವುಡ, ಪ್ರಾಂಶುಪಾಲ ಮಂಜು, ರಾಜೇಂದ್ರ, ವಿನೋದ್ ವಾಲ್ಮೀಕಿ, ಮಂಜು, ರಂಗನಾಥ ಮೊಗವೀರ, ಗಂಧರ್ವ ಇದ್ದರು.